ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 16, ಸ॥ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆರಿಂದ ಕೊಡೋಕಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮಾ.

ನೋಟಿಫಿಕೇರ್ಷ, ತಾರೀಖು 6ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಚನ್ನಪಟ್ಣದ ತಾಲ್ಲೂಕು ಕೋಸ್ ಪೇಟೆ ಸಬ್ ತಾಲ್ಲೂಕು ಕೋಸ್‌ಪೇಟೆ ಫಾರೆಸ್ಟ್ ರೇಂಜಿಗೆ ಸೇರಿದ ಮಾಕಳೀ ಮತ್ತು ತೆಂಗಿನಕಲ್ ಸ್ಟೇಟ್ ಫಾರೆಸ್ಟ್ಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿನ ಫಾರೆಸ್ಟ್ ಬೆಳೆ ಅಂದರೆ, ಸೌದೆಯನ್ನು ಈ ಕೆಳಗಿನ ಪರತ್ತುಗಳಿಗೆ ವಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯನ್ನು ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷರ್ ಸಾಹೇಬರವರು ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದ ಸ॥ 1903ನೇ ಇಸವಿ ಜುಲೈ ಮಾಹೆ ತಾರೀಖು 18ರಲ್ಲು ಚನ್ನಪಟ್ಣದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು :—

ಫಾರೆಸ್ಟಿನ ಮತ್ತು ಕೂಪಿನ ಹೆಸರು.	ಕೆಲಸಮಾಡುವ ಸರ್ತಲ್ ನಂಬರ್.	ಕೂಪು ನಂಬರ್.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಎಕರೆ ಬಂದಕ್ಕೆ ಸಿಕ್ಕತಕ್ಕ ಮೊತ್ತ.	ರೈಲ್ವೆ ಸ್ಟೇಷಗೆ ಫಾಸಲೆ.
ಮಾಕಳೀ ಫಾರೆಸ್ಟು ನಾಗವಾರದ ಕೂಪು	I	I	130	ಜುಜ್ಜಲು, ಹುಲುವೆ, ಈಜಿ, ಪಚಾರಿ, ಗೇದರಿ, ಕಗ್ಗಲಿ, ದೇವದಾರು, ಚೆನ್ನಂಗಿ, ಗೊರವಿ, ನಾಲಾಡಿ, ದಿಂಡಗ ವಗೈರೆ	ಎಕರೆ ಬಂದಕ್ಕೆ ಸು ಮಾರು ಅರ್ಧ ಟ್ಕ	ಚನ್ನಪಟ್ಣದ ರೈಲ್ವೆ ಸ್ಟೇಷಗೆ 6 ಮೈಲಿ
ಡಿಟೋ	II	I	90	ಡಿಟೋ	2½ ಟ್ಕ	ಡಿಟೋ
ಮಾಕಳೀ ಫಾರೆಸ್ಟು ಕ್ಯಾಸಾಪುರದ ಕೂಪು	III	I	120	ಡಿಟೋ	3 ಟ್ಕ	ಕೋಸ್‌ಪೇಟೆ ರೈಲ್ವೆ ಸ್ಟೇಷಗೆ 8 ಮೈಲಿ
ಮಾಕಳೀ ಫಾರೆಸ್ಟು ಅನಮಾನಹಳ್ಳಿ ಕೂಪು	IV	I	200	ಡಿಟೋ	2 ಟ್ಕ	ಡಿಟೋ
ತೆಂಗಿನಕಲ್ ಫಾರೆಸ್ಟು ದ್ಯಾಮಾಪುರದ ಕೂಪು	II	I	100	ನಾಯಿಬ್ಯಾಲಾ, ಜುಜ್ಜಲು, ಹುಲುವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಚೆನ್ನಂಗಿ ವಗೈರೆ	2½ ಟ್ಕ	ಚನ್ನಪಟ್ಣದ ರೈಲ್ವೆ ಸ್ಟೇಷಗೆ 9 ಮೈಲಿ
ತೆಂಗಿನಕಲ್ ಫಾರೆಸ್ಟು ಮಲ್ಲಂಗೆರೆ ಕೂಪು	III	I	200	ಡಿಟೋ	ಡಿಟೋ	ಡಿಟೋ ಸ್ಟೇಷಗೆ 6 ಮೈಲಿ

2. ಈ ಹರಾಜು ಪ್ರತ್ಯೇಕ ಪ್ರತ್ಯೇಕ ಕೂಪುವಾರಾಗಿಯೂ, ಇಲ್ಲವೆ ಒಟ್ಟಾಗಿಯೂ, ಅಥವಾ ಎಕರೆ 1ಕ್ಕೆ ಯಾ ಟನ್ 1ಕ್ಕೆ ಇಷ್ಟೆಂದು ನಿರ್ಧರಿಸಿ ಹರಾಜು ಮಾಡತಕ್ಕದ್ದು. ಹರಾಜು ಕ್ರಮ ನಡಿಸತಕ್ಕ ಆಫಿಸರ ಅನುಮತೀಗೆ ಬಿಳಪಟ್ಟ ಇರುತ್ತೆ. ಅಲ್ಲದೆ ಈ ಹರಾಜು ಫಾರೆಸ್ಟ್ ಕ್ಷನರವೇಟರ್ ಸಾಹೇಬರವರ ಮಂಜೂರಾತಿಗೆ ಬಿಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸತಕ್ಕ ಹೆಪ್ಯುಟಿ ಕಮಿಷರ್ ಸಾಹೇಬರವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಆಫಿಸರಿಗೆ ಅಧಿಕಾರವಿರುತ್ತೆ. ಮತ್ತು ಹರಾಜಾಗದೆ ಉಳಕೊಳ್ಳುವ ಕೂಪುಗಳನ್ನು ಅವರಿಗೆ ಕಾಣಬರುವ ರೀತಿಯಲ್ಲಿ ವ್ಯವಸ್ಥೆ ಹೊಂದಿಸುವ ಅಧಿಕಾರವು ಅವರ ದಾಗಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ " 25—0—0 " ಇಪ್ಪತ್ತೈದು ರೂಪಾಯಿಗಳನ್ನು [illegible] ಜಿಟ್ಟು ಹಾಜರ್ಮಾಡಬೇಕು. ಈ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಿನ ಮೇಲೆ ಇತರರದು ಏನೂ ಪಸು ಮಾಡಲ್ಪಡುವದು.

5. ಮಂಜೂರಾದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಸವಾಲ್ ಮಂಜೂರಾದ ತಾರೀಖು ಲಾಗಾಯತು ಒಂದು ವಾರ ದೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪೀ ಯಾ ಕಂಪಾರ್ಟ್‌ಮೆಂಟನ್ನು ದುಸರಾ ಹರಾಜು ಮಾಡಿಸಲಾಬೀತು. ಲುಕ್ಸಾನಿಗೆ ಮೊದಲಿನ ಹರಾಜುದಾರನು ಗುರಿಯಾಗಿರಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ ಮತ್ತು ಮೊದಲನೇ ಹರಾಜಿನಲ್ಲಿ ಡಿಪಾಜಿಟ್ಟಾಗಿ ಕೇವಣೀ ಇರಿಸಿದ ಮೊಬಲಗು ಜಪ್ತಾನೆ ತರೀಖು ಸರ್ಕಾರಕ್ಕೆ ದಂಡವಾಗಿ ಕೇರಿನಲ್ಪಡುತ್ತೆ.

1. ಸೌದೆ ಮತ್ತು ಚೌಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನು ಸ್ ೧೯೦೪ನೇ ಜೂನ್ ಮಾಹೆ ಆಖೈರಿನೊಳಗಾಗಿ ಪೂರೈಸತಕ್ಕದ್ದು, ತಪ್ಪಿದಲ್ಲಿ ಈ ಮೊದಲೆ ಪಾವತಿಯಾಗಿರತಕ್ಕ ಮೊಬಲಗು ದಂಡವಾಗಿ ಸರ್ಕಾರಕ್ಕೆ ಕೇರಿನಲ್ಪಡುತ್ತೆ.

2. ಫಾರೆಸ್ಟ್ ಇಲಾಖಾ ಮೂರೀಫತ್ತು ಗುರ್ತು ಅಥವ ನಿರ್ಖಾ ಮಾಡಿರತಕ್ಕ ಮರಗಳೂ, ಮತ್ತು ಮೂರು ಅಂಗುಲ ಸುತ್ತಳತೆ ಮೊಳಗಿರುವ ಸೊಪಿಗಳನ್ನು ಅಥವಾ ಗಿಡಗಳನ್ನು ವಿನಃ ಇತರ ಎಲ್ಲಾ ಮರ, ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಬಂದು ಕೊನೆಯಿಂದ ಇನ್ನೊಂದು ಕೊನೆಯ ವರಿವಿಗೆ ಸದರೀ ಕಡಿಯತಕ್ಕ ಕೂಪು ಪೂರೈಸುವ ವರಿವಿಗೂ ಕಡಿಯತಕ್ಕದ್ದು. ಈ ಹರಾಜಿನಲ್ಲಿ ತಂಗಡಿ, ಕಕ್ಕೆ, ಫಲಗಳು ಬಿಡುವ ಅಂದರೆ, ಬ್ಯಾಲ, ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಸೇ, ಅಳಲೆ, ವಗೈರೆಯೂ, ಹುಲ್ಲು ಸಹಾ ಕೇರಿರುವದಿಲ್ಲಾ. ಷರತ್ತುಗಳಿಗೆ ವೆತಿರಿಕ್ತವಾಗಿ ಮನಸೋಯಿಚ್ಛೆಯಾಗಿ ಮರಗಳನ್ನು, ಗಿಡಗಳನ್ನು ಕಡಿಯುವದು ಮತ್ತು ಇತರ ಯಾವ ತರವಾದ ಖರಾಬ್ ಕೆಲಸ ಅಂದರೆ, ನೆಲಮಟ್ಟದ ಮೇಲೆ ಮೂರು ಅಂಗುಲ ವ್ಯಾಸಕ್ಕಿಂತ ಕಡಮೆ ಮೋಟುಗಳು ಇರುವದು ವಗೈರೇ ಕಂಡುಬಂದಲ್ಲಿ ಅಂಥಾವೆಲ್ಲಾ ಖರಾಬ್ ಕೆಲಸ ದುರಸ್ತು ಪೂರೈಸುವ ವರಿವಿಗೂ ಕೂಪು ಯಾ [illegible] ಪುಗಳಲ್ಲಿ ಸೌದೆ ಯಾ ಚೌಬೀನೆ ಕತ್ತಾಯಿಸಿ ಸಾಗಿಸುವದನ್ನು ನಿಲ್ಲಿಸಲ್ಪಡುತ್ತೆ.

3. ಕೂಪು ಯಾ ಕೂಪುಗಳಲ್ಲಿ ಬಾಬು ರೂಢಿಸಿ ರಕ್ಷಣೆ ಮಾಡಿಕೊಳ್ಳಲು ಸ್ಥಳದಲ್ಲಿ ಫಾರೆಸ್ಟ್ ಇಲಾಖಾದಿಂದ ಮೊಕರೂರ್ ಮಾಡಲ್ಪಟ್ಟ ನೌಕರರಿಂದ ರಹದಾರಿಗಳು ಕೊಡಲ್ಪಡುತ್ತೆ. ಈ ರಹದಾರಿಗಳನ್ನು ರಕ್ಷಣೆ ಗುತ್ತಿರುವ ಮಾಲು ಸಹಿತ ಹಾಜರು ಇರತಕ್ಕದ್ದಲ್ಲದೆ ಕ್ಲೋಸುಪ್ಯಾಟೆ, ಚನ್ನಪಟ್ಟಣ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕ ಮಾಡಲ್ಪಟ್ಟು ಯಾವ ಸ್ಥಳ, ಸ್ಪೇರ್ಷಗಳ ಬಗ್ಗೆ ಅಜಮಾಯಿಷೀ ಬಗ್ಗೆ ಹಾಜರ್ಮಾಡಬೇಕು.

4. ಕೂಪು ಯಾ ಕೂಪುಗಳಿಂದ ಸೌದೆ ಮತ್ತು ಚೌಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆಯೂ, ಅಥವಾ ಸೂರ್ಯಾಸ್ತಮಯವಾದಮೇಲೆಯೂ ಸಾಗಿಸಕೂಡದು.

5. ಇಜಾರೆದಾರನಿಗೆ ಕತ್ತಾವಣಿ ಕೆಲಸಕ್ಕೆ ಕೊಟ್ಟು ಇರುವ ಕೂಪು ಯಾ ಕೂಪುಗಳೊಳಗೆಯಾಗಲೀ ಅಥವಾ ಭಂಡಿ ಮಾರ್ಗದಲ್ಲಿಯಾಗಲೀ ಬೆಂಕೀ ಬಿದ್ದು ಅಂಥಾ ಕೃತ್ಯ ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದದ್ದೆಂದು ಫಾರೆಸ್ಟು ಇಲಾಖಾ ಆಫಿಸರುಗಳಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ದಾರನಾಗಬೇಕು.

6. ಕಂಟ್ರಾಕ್ಟುದಾರನಿಗೂ ಮತ್ತು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಗೂ ಈ ಸಂದರ್ಭಗಳಲ್ಲಿ ಉಂಟಾಗಬಹುದಾದ ನಿಬಂಧನೆಗಳಿಗೂ ಅಂಥಾ ನಿಬಂಧನೆಗಳಿಗೆ ವಿರೋಧವಾಗಿ ನಡದ ಕೃತ್ಯಗಳ ವಿಷಯವಾಗಿಯೂ ಮತ್ತು ಯಾವ ತರವಾದ ಎಲ್ಲಾ ಹೆಚ್ಚು ಕುಂದುಗಳ ಮೇಲೆ ಫಾರೆಸ್ಟು ಕನ್ಸರವೇಟರ್ ಸಾಹೇಬರವರ ಆರ್ಡರ್ ಆಖೈರ್ ಆಗಿರುತ್ತೆ.

7. ಕಂಟ್ರಾಕ್ಟುದಾರನು ಬರದುಕೊಡತಕ್ಕ ಮುಚ್ಚಳಿಕೆಯು ಹರಾಜು ಕಾಲದಲ್ಲಿ ತಿಳುವಳಿಕೆ ಬಗ್ಗೆ ಓದಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ.

ಪ್ರಕಟನೆ.

ತಾರೀಖು 6ನೇ ಜುಲೈ 1903ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ರೇಂಜಿನಲ್ಲಿ ನಡದ ಬಂದು ನಾಟು ಕಳವು ಮೊಕದ್ದಮೆ ಪತ್ತೆಯಿಂದ ಅಪರಾಧಿಗಳಿಗೆ ಶಿಕ್ಷೆಗೆ ಗುರಿಪಡಿಸಿದ ಬಾಬ್ತು ಶ್ಲಾಘ್ಯವಾದ ಮೆಹನತ್ತು ಮಾಡಿದ್ದಕ್ಕಾಗಿ ಫಾರೆಸ್ಟ್ ಇಲಾಖಾ ನೌಕರುಮಾನೇರಿಗೆ ಮಾರ್ಜಿನ್ನಲ್ಲಿ ಕಂಡಂತೆ ಬಹುಮಾನಗಳು ತುಮಕೂರುಡಿಸ್ಟ್ರಿಕ್ಟು ಡಿಪ್ಯುಟಿ ಕಮಿಷನರ ಸಾಹೇಬರವರಿಂದ ಕೊಡಲ್ಪಟ್ಟಿರುತ್ತೆ.

20 ರೂಪಾಯಿಗಳು—ಮದ್ದಗಿರಿ ಫಾರೆಸ್ಟರು ಕೆ. ಶ್ಯಾಮರಾಯರಿಗೆ.
15 ಡಿಟೋ ಮದ್ದಗಿರಿ ಫಾರೆಸ್ಟ್ ಗಾರ್ಡ್ ಕಿಕ್ಕೇರಿಗೆ.
10 ಡಿಟೋ ಮದ್ದಗಿರಿ ಫಾರೆಸ್ಟ್ ಫೈರ್ ಗಾರ್ಡ್ ಸಾಬ್ಜಿಸಾಬೀಗೆ.

ಎಂ. ಮುತ್ತಣ್ಣ,
ಮೈಸೂರು ಶೀಮೆಯ ಅಫಿಷಿಯೇಟಿಂಗ್ ಫಾರೆಸ್ಟ್ ಕನ್ಸರ್ವೇಟರವರು.

ನೋಟಿಫಿಕೇಷನ್, ತಾರೀಖು 8ನೇ ಜುಲೈ 1903.

ಸ್ಯ 1901ನೇ ಇಸವಿ ಅಕ್ಟೋಬರ್ 2ನೇ ಮಕ್ಕಂ 245—1300ನೇ ನಂಬರು ಗವರ್ನ್‌ಮೆಂಟ್ ನೋಟಿಫಿಕೇಷನ್ XIIನೇ ರೂಲ್ಸು ಅನುಸರಿಸಿ ಈ ಕೆಳಗೆ ಕಂಡ ರೆವಿನ್ಯೂ ಮತ್ತು ಫಾರೆಸ್ಟ್ ಆಫಿಸರುಗಳಿಗೆ ತಮ್ಮೊಗ್ಗಾ ಡಿಸ್ಟ್ರಿಕ್ಟು ಉಳಿಸಿಕೊಳ್ಳಲ್ಪಡದೆ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಚಾಬೀನೆ, ಬೊಂಬು ಮತ್ತು ಸೌದೆ ಕಡಿದು ಸಾಗಿಸಿಕೊಂಡು ಬರಲು ಹಾಸಲು ತೆಗದುಕೊಂಡು ಲೈಸೆನ್ಸು ಕೊಡಲು ಅಧಿಕಾರ ಕೊಟ್ಟಿರುವ ಸಂಗತಿಯನ್ನು ಈ ಮೂಲಕ ತಿಳಿಯುವಂತೆ ಪ್ರಸಿದ್ಧಪಡಿಸಿರುತ್ತೆ :—

ನಂಬರು.	ಉದ್ಯೋಗಸ್ಥರ ಹೆಸರು.	ಅಧಿಕಾರ.	ಅಧಿಕಾರ ಎಲ್ಲಿ ಚಲಾಯಿಸತಕ್ಕದ್ದು.
1	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು	ರಿಜರ್ವ್ಡ ಮತ್ತು ಆ ರಿಜರ್ವ್ಡ ಜಾತಿ ಚಾಬೀನೆ, ಬೊಂಬು ಮತ್ತು ಹೆಸ ಸೌದೆ ಕಡದು ಸಾಗಿಸಿಕೊಂಡುಹೋಗಲು ಹಾಸಲ್ ವ ಸೂಲ್ಮಾಡಿಕೊಂಡು ಲೈಸೆನ್ಸು ಕೊಡತಕ್ಕ ಅಧಿಕಾರ	ಅವರ ಡಿಸ್ಟ್ರಿಕ್ಟಿನಲ್ಲಿ
2	ಅಮಲ್ದಾರರು ..	ಈ ಕೆಳಗೆ ವಿವರಿಸಿರುವ ಬಾಬುಗಳಿಗೆ ಫೀ ವಸೂಲ್ಮಾಡಿಕೊಂಡು ಕಡಿದು ಸಾಗಿಸಿಕೊಂಡು ಹೋಗಲು ಲೈಸೆನ್ಸು ಕೊಡತಕ್ಕ ಅಧಿಕಾರ (1) ಆ ರಿಜರ್ವ್ಡ ಜಾತಿ ಚಾಬೀನೆ (2) ಬೊಂಬು (3) ವಣ ಸೌದೆ	ಅವರ ತಾಲ್ಲೂಕಿನಲ್ಲಿ
3	ಸೇಕ್ದಾರ್ರು ...	ವಣಸೌದೆ ಕಡಿದು ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ಫೀ ವ ಸೂಲ್ಮಾಡಿಕೊಂಡು ಲೈಸೆನ್ಸು ಕೊಡತಕ್ಕ ಅಧಿಕಾರ	ಅವರ ಹೋಬಳಿಯಲ್ಲಿ
	ಫಾರೆಸ್ಟರು ..	ಡಿಟೋ ಡಿಟೋ	ಅವರ ಸಬ್ ರೇಂಜಿನಲ್ಲಿ
5	ಡಿಪ್ಯುಟಿ ಕಮಿಷರ್ ಸಾಹೇಬರವರು ಸ್ಪೆಷಲ್ಲಾಗಿ ನೇಮಕ ಮಾಡುವ— (ಎ) ಪಟೇಲ—ಶ್ಯಾನಭೋಗರುಗಳು. (ಬಿ) ಹೋಬಳಿ ಸ್ಕೂಲ್‌ಮಾಸ್ಟರಗಳು (ಸಿ) ಇತರೆ ಬರಹಗಾರ ಜನಗಳು.	ಡಿಟೋ ಡಿಟೋ	ಡಿಪ್ಯುಟಿ ಕಮಿಷರ್ ಸಾಹೇಬರವರಿಂದ ನಿಷ್ಕರ್ಷೆ ಮಾಡಲ್ಪಡುವ ಸ್ಥಳಗಳಲ್ಲಿ

(2) ರಫ್ತನಲ್ಲಿರುವ ಚಾಬೀನೆ, ಬೊಂಬು ಮತ್ತು ಸೌದೆ ತನಿಖೆ ಮಾಡತಕ್ಕ ಬಗ್ಯೆ ಎಲ್ಲಾ ರೆವಿನ್ಯೂ ಫಾರೆಸ್ಟು ಮತ್ತು ಪೋಲೀಸು ಆಫಿಸರುಗಳಿಗೆ ಇದರಿಂದ ಅಧಿಕಾರ ಕೊಟ್ಟಂತೆ.

ಎಂ. ವೆಂಕಟನಾರಣಪ್ಪ,
ಪೂರ್ ಡಿಪ್ಯುಟಿ ಕಮಿಷನರ ಶಿವಮೊಗ್ಗ ಡಿಸ್ಟ್ರಿಕ್ಟು